ಅಧಿಕಾರಿಗಳು ಬಹಳ ಮಂದಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವ ಮಾತು ಸತ್ಯ. ನಾನು ಸದನ ಮುಗಿದ ಮೇಲೆ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ವಾಸ್ತವಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಾನು ಮತ್ತು ಅವರು ಸೇರಿ ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಸಚಿವರು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮಂದಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಅವರ ಮೇಲೆ ಏನು ಕ್ರಮ ಜರುಗಿಸುತ್ತೀರಿ?

ಶ್ರೀ ಬಿ.ಎನ್.ಬಚ್ಚೇಗೌಡ: ನಾನು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಮಂದಗತಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ವಿಚಾರಿಸುತ್ತೇನೆ. ಪೈಪ್‌ಲೈನ್ ಲೇ ಮಾಡದೇ ಇರುವುದಕ್ಕೆ ಕಾರಣ, ಪಿಹೆಚ್‌ಸಿ ಪೈಪ್ ಲೈನ್‌ಹಾಕಲು ಏನು ಅಡ್ಡ ಬಂದಿದೆ, ಇವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಬಾದಾಮಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

33 (164)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಪಟ್ಟಣಕ್ಕೆ ತ್ವರಿತ ನೀರು ಸರಬರಾಜು ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಯಾವಾಗ ಕಳಿಸಲಾಗಿದೆ.

ಆ) ಕೇಂದ್ರಕ್ಕೆ ಒತ್ತಡ ತಂದು ಈ ಕಾಮಗಾರಿಯನ್ನು ಜರೂರಾಗಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎಸ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಕೇಂದ್ರ ಸರ್ಕಾರಕ್ಕೆ ದಿನಾಂಕ 23.5.96ರಲ್ಲಿ ಅನುಮೋದನೆಗಾಗಿ ಕಳುಹಿಸಲಾಗಿದೆ.

ಆ) ಕೈಗೊಳ್ಳಲಾಗುವುದು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಬಾದಾಮಿ ಪಟ್ಟಣಕ್ಕೆ ಶಾಶ್ವತ ಪರಿಹಾರದ ಕುಡಿಯುವ ನೀರಿನ ಯೋಜನೆಗೆ ತಾವು ಕೇಂದ್ರ ಸರ್ಕಾರಕ್ಕೆ 23-5-96ರಂದು ಕಳುಹಿಸಿದ್ದೀರಿ. ಇವತ್ತಿಗೆ ಎರಡು ವರ್ಷವಾಯಿತು, ಏಕೆ ನಿಧಾನವಾಗಿದೆ? ಇದಕ್ಕೆ ಏನು ಕಾರಣ?

ಶ್ರೀ ಬಿ.ಎಸ್.ಬಚ್ಚೇಗೌಡ: ಬಾದಾಮಿ ಪಟ್ಟಣಕ್ಕೆ ನೀರು ಒದಗಿಸುವ ಯೋಜನೆಗೆ 1994ರಲ್ಲಿ 184 ಲಕ್ಷ ರೂ.ಗಳು ಮಂಜೂರಾಯಿತು. ಕೇಂದ್ರಸರ್ಕಾರಕ್ಕೆ ತ್ವರಿತವಾಗಿ ಎ.ಡಬ್ಲ್ಯೂ.ಎಸ್.ನಲ್ಲಿ ಯೋಜನೆ ಮಾಡಿ ಕಳುಹಿಸುವಂಥ ವ್ಯವಸ್ಥೆಯಾಗಿದೆ. ಅಲ್ಲಿ ಮಲಪ್ರಭಾವನ್ನು ಮೂಲವಾಗಿಟ್ಟುಕೊಂಡು ನೀರನ್ನು ತೆಗೆದುಕೊಳ್ಳುವಂಥದ್ದು ಇತ್ತು. ಬೇಸಿಗೆ ಸಮಯದಲ್ಲಿ ಕಾಲುವೆ ನೀರು ಹರಿಯುವುದಿಲ್ಲ ಎಂದು ತಿಳಿದು ಅದಕ್ಕೆ ಒಂದು ಬ್ಯಾರೇಜ್ ಕಟ್ಟಬೇಕೆಂದು ಪುನರ್ ಪರಿಶೀಲನೆ ಮಾಡಿದಾಗ ಅಲ್ಲಿ ಅಂದಾಜು ಸ್ವಲ್ಪ ಜಾಸ್ತಿಯಾಯಿತು. ಅದು ಸುಮಾರು 340 ಲಕ್ಷಕ್ಕೂ ಹೋಯಿತು. ಕೇಂದ್ರಸರ್ಕಾರಕ್ಕೆ 1996ರಲ್ಲಿ ಕಳುಹಿಸಿದಾಗ ಅದಕ್ಕೆ ಅವರು ನೀರಾವರಿ ಇಲಾಖೆಯಿಂದ ಎನ್.ಓ.ಸಿ ಕೇಳಿದ್ದಾರೆ. ನಾವು ನೀರಾವರಿ ಇಲಾಖೆಯಿಂದ ಅನುಮತಿ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಹೀಗಿದ್ದರೂ ಸಹ ಅದು ಸರಿಯಾಗಿಲ್ಲ, ಬಳಸಿರುವ ಪದಗಳು ಸರಿಯಾಗಿಲ್ಲ ಅದನ್ನು ಎಲ್ಲಾ ಸರಿ ಮಾಡಿ ಕೊಡಿ ಎಂದು ಪುನಃ ಕೇಂದ್ರ ಸರ್ಕಾರದವರು ವಾಪಸ್ ಕಳುಹಿಸಿದ್ದಾರೆ. ನಿನ್ನೆ ನಾನು ಹಾಗೂ ಮಾನ್ಯ ಸದಸ್ಯರು ಮಾನ್ಯ ನಾಗೇಗೌಡರನ್ನು ಕಂಡು ಅದನ್ನು ಬೇರೆ ರೂಪದಲ್ಲಿ ಕಳುಹಿಸಿಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದಲ್ಲಿ ಆಲೂರು, ಶೃಂಗೇರಿ, ಬಾದಾಮಿ, ಈ ಇರೀಗೇಷನ್ ಪ್ರಾಜೆಕ್ಟ್‌ನಲ್ಲಿ ''ಕುಡಿಯುವ ನೀರಿಗೆ ಮೊದಲ ಆದ್ಯತೆ'' ಎಂದು ಇದ್ದರೂ ಸಹ ಇಲ್ಲಿ ಸಾಕಷ್ಟು ತೊಂದರೆಯಾಗುತ್ತದೆ. ಆದ್ದರಿಂದ ಪರ್ಮಿಷನ್ ಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಸರಿಯಾಗಿ ಪತ್ರವನ್ನು ಬರೆಯಬೇಕಾಗುತ್ತದೆ. ಅಲ್ಲಿ ಹೋದ ನಂತರ ಈ ಕ್ರಮ ಮಾಡಿಕೊಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾರ್ಚ್ ಕೊನೆಯೊಳಗೆ ಈ ಕೆಲಸ ಮಾಡುತ್ತೀರಾ? ಮಾನ್ಯ ಸಚಿವರು ಮನಸ್ಸು ಮಾಡಿದರೆ ಸಾಧ್ಯವಿದೆ.

ಅಧ್ಯಕ್ಷರು: ಅದು ಹೇಗೆ ಆಗುತ್ತದೆ? ಸರಿ ಆದಷ್ಟು ಬೇಗ ಮಾಡಿಕೊಡಿ. ಮಾರ್ಚ್‌ಯೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡಿ, ಸಾಧ್ಯವಾಗಿಲ್ಲವೆಂದರೆ ಏಪ್ರಿಲ್ ಅಥವಾ ಮೇನಲ್ಲಿ ಮಾಡಿಕೊಡಿ.

ಮಾಗಡಿ ಟೌನ್‌ಗೆ ಕುಡಿಯುವ ನೀರಿನ ಸರಬರಾಜು.

35 (79)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಟೌನಿಗೆ ಶಾಶ್ವತ ಕುಡಿಯುವ ನೀರಿನ ಮಂಚನಬೆಲೆ ಯೋಜನೆ ಕಾರ್ಯದ ಪ್ರಗತಿ ಯಾವ ಹಂತದಲ್ಲಿದೆ?